ಅ) ಕೊಳ್ಳೇಗಾಲದ ತಾ : ಕಾವೇರಿ ನದಿಯ ಪ್ರವಾಹ ಪೀಡಿತ ಪ್ರದೇಶವಾದ ಹಳೆ ಹಂಪಾಪುರ ಗ್ರಾಮದ 357 ಸರ್ವೆ ನಂಬರ್‌ನಲ್ಲಿ ಭೂಮಿಯಲ್ಲಿರುವ ಮರಳನ್ನು ಸಾಗಿಸಲು 1987ನೇ ಇಸವಿಯಲ್ಲಿ ಗುತ್ತಿಗೆಯನ್ನು ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಈ ಜಮೀನಿನಿಂದ ಮರಳನ್ನು ಸಾಗಿಸುವಾಗ ಲಾರಿಗಳ ಓಡಾಟದಿಂದ ರಸ್ತೆಯಿಂದ ಧೂಳು ಮೇಲೆದ್ದು ರೈತರ ಹಿಪ್ಪು ನೇರಳೆ ಬೆಳೆಗಳಿಗೆ ಬಿದ್ದು ಬೆಳೆ ಹಾಳಾಗುತ್ತಿದ್ದುದಲ್ಲದೆ, ಊರಿನ ಮನೆಗಳಿಗೆ ಧೂಳು ನುಗ್ಗುತ್ತಿದ್ದ ಕಾರಣ ಮರಳು ಸಾಗಿಸುವುದನ್ನು ಊರಿನ ಜನತೆ ಪ್ರತಿಭಟಿಸಿ ಸರ್ಕಾರದವರಿಗೆ ಮನವಿ ಸಲ್ಲಿಸಿದ್ದು ನಿಜವೇ?

ಇ) ಹಾಗಿದ್ದಲ್ಲಿ, ಅಂದಿನಿಂದ ನಿಲ್ಲಿಸಲಾಗಿದ್ದ ಮರಳು ಸಾಗಾಣಿಕೆಯನ್ನು 1993ನೇ ಇಸವಿ ಜನವರಿ ತಿಂಗಳಿನಿಂದ ಮತ್ತೆ ಸದರಿ ಸ್ಥಳದಿಂದ ಮರಳು ಸಾಗಿಸುತ್ತಿರುವುದಕ್ಕೆ ಕಾರಣಗಳೇನು?

ಈ) ಅಲ್ಲಿನ ಜನತೆಗೆ ಕಷ್ಟ ನಷ್ಟವುಂಟಾಗುತ್ತದೆ ಎಂದು ಗೊತ್ತಿದ್ದಾಗ್ಯೂ ಸಹ ಮತ್ತೆ ಅಲ್ಲಿಂದ ಮರಳು ಸಾಗಿಸಲು ಗುತ್ತಿಗೆ ನೀಡಿರುವ ಅಧಿಕಾರಿಗಳ ಮೇಲೆ ಸರ್ಕಾರದವರು ಜರೂರು ಕ್ರಮ ಕೈಗೊಳ್ಳುವರೆ?

ಶ್ರೀ ಡಿ. ಎ. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) 24-6-1981ರಿಂದಲೇ ಈ ಪ್ರದೇಶದಲ್ಲಿ ಗುತ್ತಿಗೆ ನೀಡಿದ್ದು 23-6-86ರಲ್ಲಿ ಕೊನೆಗೊಂಡ ನಂತರ ಇದರಲ್ಲಿ ಸ್ವಲ್ಪ ಭಾಗವನ್ನು ಅಕ್ಟೋಬರ್ 1992ರಲ್ಲಿ ಮಂಜೂರು ಮಾಡಿದೆ.

ಆ) ನಿಜ., ಆದರೆ ಸದರಿ ಸ್ಥಳದಿಂದ ಮರಳು ತೆಗೆಯುವುದರಿಂದ ಈ ರೀತಿಯ ಯಾವುದೇ ಹಾನಿಯಾಗುವ ಸಾಧ್ಯತೆ ಇಲ್ಲವೆಂದು ಸ್ಥಳ ತನಿಖೆಯಿಂದ ದೃಢ ಪಟ್ಟಿದೆ.

ಇ) ಸದರಿ ಸ್ಥಳದಿಂದ ಮರಳು ಸಾಗಾಣಿಕೆ ನಿಂತಿರಲಿಲ್ಲ ಆಗಿಂದಾಗ್ಗೆ ನಡೆಯುತ್ತಿತ್ತು. ಸದರಿ ಸ್ಥಳದಲ್ಲಿ ಅನಧಿಕೃತವಾಗಿ ಮರಳು ಸಾಗಣೆಯಿಂದ ಉಂಟಾಗುತ್ತಿರುವ ರಾಜಧನ ನಷ್ಟ ತಪ್ಪಿಸಲು ಕೊಳ್ಳೇಗಾಲದ ತಹಶೀಲ್ದಾರರು ನೀಡಿದ ನಿರಾಪೇಕ್ಷಣ ಪತ್ರದ ಮೇರೆಗೆ ನಿಯಮಾನುಸಾರ ಗುತ್ತಿಗೆ ಮಂಜೂರು ಮಾಡಿರುವುದು ಸಮಂಜಸವಾಗಿರುತ್ತದೆ.

ಈ) ಉದ್ಭವಿಸುವುದಿಲ್ಲ.
ಕಷ್ಟ ನಷ್ಟಗಳೆಂದು ದೂರಿರುವ ವಿಷಯ ಸತ್ಯಕ್ಕೆ ದೂರವಾದುದೆಂದು ತನಿಖೆಗಳಿಂದ ತಿಳಿದು ಬಂದಿದೆ. ದ್ವೇಷಾಸೂಯೆಗಳಿಂದ ಈ ರೀತಿ ದೂರುತ್ತಿರುವುದು ಕಂಡು ಬಂದಿದೆ.

<u>ವಿಷಯ :- ಕರ್ನಾಟಕದಲ್ಲಿರುವ ಕಾರ್ಮಿಕ ನ್ಯಾಯಾಲಯಗಳ ಸಂಖ್ಯೆ.</u>

Q:1495

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಕರ್ನಾಟಕದಲ್ಲಿರುವ ಕಾರ್ಮಿಕ ನ್ಯಾಯಾಲಯಗಳೆಷ್ಟು?

ಆ) ಕಳೆದ ಮೂರು ವರ್ಷಗಳಿಂದ ಎಷ್ಟು ಕಾರ್ಮಿಕ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿವೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಕಾರ್ಮಿಕ ನ್ಯಾಯಾಲಯಗಳು - 10
ಆ) ಔದ್ಯಮಿಕ ನ್ಯಾಯಾಧೀಕರಣಗಳು - 04

ಒಟ್ಟು : - 14

ಆ)

ವರ್ಷ	ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳು
1989-90	11638
1990-91	10813
1991-92	11594

ವಿಷಯ :- ರಾಜ್ಯದಲ್ಲಿ ಗ್ರಾನೈಟ್ ಉದ್ಯಮ.

Q:1496

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಖನಿಜ ಸಂಸ್ಥೆಯವರು ಗ್ರಾನೈಟ್ ಕಲ್ಲುಗಳನ್ನು ಎಷ್ಟು ಪ್ರದೇಶದಲ್ಲಿ ತೆಗೆಯುತ್ತಿದ್ದಾರೆ?
ಆ) ಗ್ರಾನೈಟ್ ಉದ್ಯಮದಿಂದ ರಾಜ್ಯ ಸರ್ಕಾರಕ್ಕೆ ಬರುವ ರಾಜಧನವೆಷ್ಟು?
ಇ) ರಾಜಧನವನ್ನು ಪಡೆಯುವ ಇತರ ಖನಿಜಗಳ ಮಾಹಿತಿ ನೀಡುವುದು

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ-ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದ ಅಂಗ ಸಂಸ್ಥೆಯಾದ ಮೈಸೂರು ಮಿನರಲ್ಸ್‌ಗೆ 1733 ಎಕರೆಯಷ್ಟು ಗುತ್ತಿಗೆ ಪ್ರದೇಶವಿದ್ದು ಅದರಲ್ಲಿ ಸುಮಾರು 416 ಎಕರೆಯಷ್ಟು ಪ್ರದೇಶದಲ್ಲಿ ಕಲ್ಲುಗಳನ್ನು ತೆಗೆಯುತ್ತಿದ್ದಾರೆ. 4 ಕಲ್ಲು ಗುಣಿಗುತ್ತಿಗೆಗಳನ್ನು ಹೊಂದಿದ್ದಾರೆ .
ಆ) 1991-92ನೇ ಸಾಲಿನಲ್ಲಿ 2.72 ಕೋಟಿಯಷ್ಟು ರಾಜಧನ ವಸೂಲಾಗಿದೆ.
1992-93ನೇ ಸಾಲಿನಲ್ಲಿ ಜನವರಿ ಅಂತ್ಯದವರೆಗೆ 2 ಕೋಟಿ ರೂ. ವಸೂಲಾಗಿದೆ.